ಅಧಿಕಾರಿಗಳನ್ನು ಆ ಸಂಸ್ಥೆಗೆ ಕಳುಹಿಸಿ ಕೊಟ್ಟು ಸಂಪೂರ್ಣವಾದ ಮಾಹಿತಿಯನ್ನು ಪಡೆದುಕೊಂಡು ಕಾನೂನು ರೀತಿ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎ. ಮಂಜು: ಮಾನ್ಯ ಅಧ್ಯಕ್ಷರೆ, ನಿಮ್ಮ ಅಡಿಟ್‌ನಲ್ಲಿಯೇ ಇದೆ. ಅಡಿಟ್‌ನಲ್ಲಿರತಕ್ಕಂಥದ್ದಕ್ಕೆ ಮಂತ್ರಿಗಳು ಮತ್ತೆ ಇನ್ನು ಮಾಹಿತಿ ತೆಗೆದುಕೊಳ್ಳಬೇಕೆಂದು ಹೇಳಿದರೆ, ಅವರು ಉತ್ತರ ಸರಿಯಾಗಿ ನೋಡಿಕೊಂಡು ಬಂದಿಲ್ಲ ಎಂದು ಆಯಿತು. ಈ ಪ್ರಶ್ನೆ ಬಹಳ ಸೀರಿಯಸ್ ಇದೆ.

ಅಧ್ಯಕ್ಷರು: ಅವರು ಇಷ್ಟು ಹೊತ್ತು ಉತ್ತರ ಕೊಟ್ಟಿದ್ದಾರೆ ಏನು ಮಾಡಬೇಕು ಹೇಳಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ಅಗ್ರೀಮೆಂಟ್ ಪೇಪರ್ ಬಗ್ಗೆ ನಿಮಗೇನು ಶಂಕೆ ಬಂದಿದೆ ಅದರ ಬಗ್ಗೆ ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆಂದು ಹೇಳಿದ್ದೇನೆ.

ಶ್ರೀ ಟಿ.ಬಿ. ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಇದು ಸೊಸೈಟಿಯಲ್ಲಿ ನಡೆಯತಕ್ಕಂತಹ ವ್ಯವಹಾರ ಎಲ್ಲವೂ ಕೂಡ ನೇರವಾಗಿ ಗೊತ್ತಾಗುವುದಿಲ್ಲ. ಆ ಕಾರಣಕ್ಕೋಸ್ಕರ ಒಂದು ಸಾರಿ ಆಕ್ಷೇಪ ಬಂದಂತಹ ಸಂದರ್ಭದಲ್ಲಿ ಕೊನೆ ಪಕ್ಷ ರಿಜಿಸ್ಟ್ರಾರ್‌ರವರಿಂದ enquiry ಮಾಡಿಸಿ. ಇಲ್ಲ ನಿಮ್ಮ ಕಾರ್ಯದರ್ಶಿಯವರಿಂದ enquiry ಮಾಡಿಸಿ. ಅವರು ಮಾಡಿರುವಂತಹ ಇಲ್ಲೀಗಲ್ activityಯನ್ನು legalize ಮಾಡುವುದು ಬೇಡ. ಅದಕ್ಕೋಸ್ಕರ ರಿಜಿಸ್ಟ್ರಾರ್ ಅಥವಾ ಕಾರ್ಯದರ್ಶಿಯವರಿಂದ enquiry ಮಾಡಿಸಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಅಧ್ಯಕ್ಷರೆ, ನಮ್ಮ ಕಾರ್ಯದರ್ಶಿಯವರ ನೇತೃತ್ವದಲ್ಲಿ ಪರಿಶೀಲನೆ ಮಾಡಿಸಿ ಕ್ರಮ ತೆಗೆದುಕೊಳ್ಳುತ್ತೇವೆ.

Farmers Loan Waiver

1235 Sri Ramesh Bandisiddegowda A.B. Will the Minister for Co-operation answer this question:

a) What is the amount of farmer's loan waiver of 2005-06 in relation to agriculture credit service co-operative banks;

b) Whether the benefit of loan waiver has reached the farmers fully? What is the result of loan waiver in the State and in Mandya District; (Percentage details be furnished)

c) Has it come to the notice of the Government that claims have been made in bogus names in some agriculture credit service co-operative banks? If so, how many cases have been noticed;

d) How many cases have been noticed in Mandya district? What are the steps taken by Government;

e) Has it comes to the notice of Government that irregularity has taken place in respect of Yeliyuru agriculture service co-operative bank of Mandya taluk; If so, what is the action taken against the Secretary of the society;

f) How many farmers have got the benefit of the scheme in 235 agriculture credit service co-operative banks of the district; (Talukwise information be furnished);

g) Having got the benefit of the State Government scheme, the same documents have been used to get the benefit under the Central Government scheme. What is the number of such cases?

Shri Lakshman S. Savadi (Co-operation minister)

a) Claims to the extent of Rs. 1,732.31 crores have been received from agriculture credit service co-operative banks under the State Government's loan waiver scheme. Of this, Rs. 1,681.59 crores has been released to the co-operative societies.

b) The benefit of loan waiver has reached the farmers fully. Rs. 1,681.59 crores has been released to the co-operatives in the State of which Rs. 92.62 crores has gone to Mandya district. This amounts to 97% of the total claims in the State and 99% of the claims relating to Mandya district.

c) As per the inspection report of the Accountant General, bogus claims in respect of agriculture credit service co-operative banks have not been reported.

d) No cases have been reported in Mandya District as per the report of the Accountant General.

e) A petition has been received alleging irregularity in Yeliyuru agriculture service co-operative bank of Mandya Taluk and an enquiry under section 64 of Karnataka Co-operative Societies Act 1959 has been held. The changes have been established as per the enquiry report. An order under section 68 has been issued and the committee of the society has denied the charges. In this background the committee has been superceded under section 30(1) of the Act and an administrator appointed. The administrator has been instructed to take legal action against the Secretary of the society.

f) 51,835 farmers of 235 agriculture credit service co-operative banks of the district have got the benefit.

Taluk	Number	Taluk	Number
Mandya	13614	Nagamangala	3804
Maddur	13104	Pandavapura	5552
Malavalli	6548	K.R. Pete	4658
Shriranga Pattana	4555	Total	51,835

g) No such cases have come to the notice of the Department.

ಶ್ರೀ ಸುನಿಲ್ ವಿ. ಹೆಗಡೆ (ಮಾನ್ಯ ರಮೇಶ್ ಬಂಡಿಸಿದ್ದೇಗೌಡ ಎ.ಬಿ. ರವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಈ ಯೋಜನೆಯಲ್ಲಿ ಕೆಲವು ವ್ಯವಸಾಯ ಸೇವಾ ಸಹಕಾರಿ ಬ್ಯಾಂಕುಗಳಲ್ಲಿ ಬೋಗಸ್ ಹೆಸರಿನಲ್ಲಿ ಅವ್ಯವಹಾರ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದೇವೆ. ಯಾವುದೂ ವರದಿಯಾಗಿರುವುದಿಲ್ಲ ಎಂದು ಹೇಳಿದ್ದಾರೆ. ಅದೇ ರೀತಿ ಮಂಡ್ಯ ಜಿಲ್ಲೆಯಾದ್ಯಂತ ಈ ರೀತಿಯ ಪ್ರಕರಣಗಳು ಎಷ್ಟು ಎಂದರೆ, ಇಂತಹ ಪ್ರಕರಣಗಳು ಪತ್ತೆಯಾಗಿರುವುದಿಲ್ಲ ಎಂದು ಹೇಳಿದ್ದಾರೆ. ಆದರೆ ಯಲಿಯೂರು ವ್ಯವಸಾಯ ಸೇವಾ ಸಹಕಾರಿ ಸಂಘದ ಮೇಲೆ Section 64 enquiry ಆಗಿ

ನಂತರ Section 68 enquiry ಯೂ ಆಗಿದೆ. ಸಾಲ ಮನ್ನಾ ಯೋಜನೆಯಲ್ಲಿ 1–1–06 ರಿಂದ 31–12–06ರವರೆಗೆ ಬೆಳೆ ಸಾಲ ಪಡೆದ ಎಲ್ಲಾ ರೈತರಿಗೆ 25,000 ಸಾಲ ಮನ್ನಾ ಮಾಡಲಾಗಿತ್ತು. ಆದರೆ 21 ಜನ ಸಾಲಗಾರರ ವಿತರಣೆಯಲ್ಲಿ 4–1–07ಕ್ಕೆ ಸಾಲ ಮಂಜೂರಾತಿ ಮಾಡಿಕೊಂಡು ಹಿಂದಿನ ಡೇಟ್ ಹಾಕಿಕೊಂಡು ಅವರಿಗೆ ಸಾಲ ವಿತರಣೆ ಮಾಡಿದ ಹಾಗೆ ಮಾಡಿ ಕಾನೂನು ಬಾಹಿರವಾಗಿ ಸಾಲ ಮನ್ನಾ ಮಾಡುವ ಕೆಲಸವನ್ನು ಅಲ್ಲಿಯ ಕಾರ್ಯದರ್ಶಿಗಳು ಮಾಡಿದ್ದಾರೆ. ಅದೇ ರೀತಿಯಾಗಿ ಹಲವಾರು ರೈತರು ಉದಾಹರಣೆಗೆ ಶೇಖರ್ ಬಿನ್ ತಿರುಮಲೇಗೌಡ ಇರಲಿ, ವಿಜಯ ಕುಂ. ರಾಮೇಗೌಡ ಇರಲಿ, ಹೀಗೆ ಹಲವಾರು ರೈತರ ಹೆಸರಿನಲ್ಲಿ ಕಾರ್ಯದರ್ಶಿಗಳು ಬೋಗಸ್ ವ್ಯವಹಾರ ಮಾಡಿ Secton 64 enquiryಯಲ್ಲಿ ಇದು ಪ್ರೂವ್ ಆಗಿದೆ. ಶೇಖರ್ ಬಿನ್ ತಿರುಮಲೇಗೌಡ ಎಂಬ ರೈತನದು ಏನಾಗಿದೆ ಎಂದರೆ, ಕೋ–ಅಪರೇಟಿವ್ ಸಂಸ್ಥೆಯಲ್ಲಿ ಸಾಲ ಕೊಡಬೇಕಾದರೆ, ಬೇರೆ ಬ್ಯಾಂಕಿನವರಿಂದ NOC ಪಡೆಯಲಿಲ್ಲ. ಆ ವ್ಯಕ್ತಿ ಸಿಂಡಿಕೇಟ್ ಬ್ಯಾಂಕಿನಲ್ಲಿ ಸಹ ಸಾಲ ಪಡೆದು ಎರಡೂ ಕಡೆ ಸಾಲ ಮನ್ನಾ ಮಾಡಿಕೊಳ್ಳುವ ವ್ಯವಸ್ಥೆ ಇಲ್ಲಿ ಆಗಿ ಇದರಲ್ಲಿ ಭಾರೀ ಅವ್ಯವಹಾರ ಆಗಿರುವುದರಿಂದ ಕಾರ್ಯದರ್ಶಿಗಳನ್ನು ಸಸ್ಪೆಂಡ್ ಕೂಡ ಮಾಡಿದ್ದಾರೆ. ಆಡಳಿತಾಧಿಕಾರಿಯನ್ನು ನೇಮಿಸಿದ್ದರೂ ಸಹ ಇದುವರೆಗೆ ಆಡಳಿತಾಧಿಕಾರಿ ಬಂದು ಛಾರ್ಜನ್ನು ತೆಗೆದು ಕೊಂಡಿಲ್ಲ. ಇದುವರೆಗೂ ಕಾರ್ಯದರ್ಶಿಯವರ ಕೈಯಲ್ಲಿ ಅಧಿಕಾರ ನಡೆಯುತ್ತಿದೆ, ಸೊಸೈಟಿ ನೇಮಕ ಮಾಡಿದಂತಹ ಕಾರ್ಯದರ್ಶಿ ಇವತ್ತು 8,000 ರೂ. ಸಂಬಳ ತೆಗೆದುಕೊಳ್ಳುತ್ತಾರೆ. ಅಧ್ಯಕ್ಷರು ಹಾಗೂ ಇತರರ ಹೆಸರಿನ ಮೇಲೆ ಖರ್ಚು ಹಾಕಿಕೊಂಡು ಅವನು ದುಡ್ಡನ್ನು ಎಂಜಾಯ್ ಮಾಡುತ್ತಿದ್ದಾನೆ. ಇದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ಮಾನ್ಯ ಗೌರವಾನ್ವಿತ ಸದಸ್ಯರು ಏನು ಇವತ್ತಿನ ದಿವಸ ಸಾಲ ಮನ್ನಾ ಯೋಜನೆಯಲ್ಲಿ ಕೆಲವೊಂದು ಲೋಪದೋಷಗಳು ಆಗಿರುವಂಥದ್ದನ್ನು ಎತ್ತಿ ತೋರಿಸಿದ್ದಾರೆ. ಈಗಾಗಲೇ ಆಡಳಿತ ಮಂಡಳಿಯನ್ನು ನಾವು ರದ್ದುಗೊಳಿಸಿದ್ದೇವೆ. ಆ ಕಾರ್ಯದರ್ಶಿ ಯವರನ್ನು ಕೂಡ ಸಸ್ಪೆಂಡ್ ಮಾಡಿದ್ದೇವೆ. ಆಡಳಿತಾಧಿಕಾರಿ ಯವರನ್ನು ನೇಮಕ ಮಾಡಿದ್ದೇವೆ. ಅವರು ಮೇಲ್ಮನವಿಯನ್ನು ಸಲ್ಲಿಸಿದ್ದಾರೆ ಅದು

ವಿಚಾರಣೆ ಹಂತದಲ್ಲಿದೆ. ವಿಚಾರಣೆ ಮುಗಿದ ಮೇಲೆ ಇನ್ನೂ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಸುನಿಲ್ ವಿ. ಹೆಗಡೆ: ಮಾನ್ಯ ಅಧ್ಯಕ್ಷರೆ, ಆಡಳಿತಾಧಿಕಾರಿ ಇನ್ನೂ ಕೂಡ ಅಲ್ಲಿ ಹೋಗಿ ಛಾರ್ಜ್ ತೆಗೆದುಕೊಂಡಿಲ್ಲ. ಕಾರ್ಯದರ್ಶಿಯವರೂ ಕೂಡ ಇನ್ನೂ ಅವರೇ ಇದ್ದಾರೆ. ಹೀಗಾಗಿ ಇನ್ನೂ ಹೆಚ್ಚಿನ ಅವ್ಯವಹಾರ ಮಾಡುವುದಕ್ಕೆ ಅವಕಾಶ ಕೊಟ್ಟ ಹಾಗೆ ಆಗುತ್ತದೆ. ಪತ್ರಿಕೆಗಳಲ್ಲಿ ಈ ವಿಷಯ ಬಂದು ಮುತ್ತಿಗೆ ಹಾಕಿದ್ದಾರೆ. ಅವ್ಯವಹಾರ ಆಗಿರುವ ಬಗ್ಗೆ ಎಲ್ಲಾ ದಾಖಲೆಗಳಿವೆ. ನಾನು ಮಾನ್ಯ ಮಂತ್ರಿಗಳಲ್ಲಿ ವಿನಂತಿ ಮಾಡುವುದೇನೆಂದರೆ, ಕೂಡಲೇ ಕಾರ್ಯದರ್ಶಿಗಳಿಗೆ ಸಸ್ಪೆಂಡ್ ಮಾಡಿರುವುದನ್ನು ಜಾರಿ ಮಾಡಿ ಆಡಳಿತಾಧಿಕಾರಿ ಕೂಡಲೇ ಅಲ್ಲಿ ಛಾರ್ಜ್ ತೆಗೆದುಕೊಳ್ಳುವಂತಹ ವ್ಯವಸ್ಥೆಯನ್ನು ಮಾಡಿದರೆ, ಒಳ್ಳೆಯದಾಗುತ್ತದೆ ಎಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ: ಮಾನ್ಯ ಅಧ್ಯಕ್ಷರೆ, ಅವರು ಇನ್ನು ಮಾಹಿತಿ ಕೊಟ್ಟಿಲ್ಲವೆಂದು ಕಾಣುತ್ತದೆ. ಆಡಳಿತಾಧಿಕಾರಿ ಈಗಾಗಲೇ ಛಾರ್ಜ್ ತೆಗೆದು ಕೊಂಡಿದ್ದಾರೆ. ಅವರು ಈಗಾಗಲೇ ಕಾರ್ಯನಿರ್ವಹಿಸುತ್ತಿದ್ದಾರೆ.

ಇಂಡಿ ತಾಲ್ಲೂಕಿನ ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆಯ ಕಾಮಗಾರಿ ಬಗ್ಗೆ

1234 ಶ್ರೀ ಕಟಕೊಂಡ ವಿಠ್ಠಲ್ ದೊಂದಿಬಾ (ನಾಗಠಾಣ್) ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಇಂಡಿ ತಾಲ್ಲೂಕಿನಲ್ಲಿರುವ ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆ (ಮರಗೂರ) ಕಾಮಗಾರಿಯು ಸ್ಥಗಿತಗೊಂಡಿರುವುದು ನಿಜವೆ;

ಆ) ಈ ಕಾರ್ಖಾನೆಯನ್ನು ಖಾಸಗಿ ಕಂಪನಿಯೊಂದಿಗೆ ಒಪ್ಪಂದ ಮಾಡಿ ಕೊಡಲಾಗಿದೆಯೇ; ಹಾಗಿದ್ದಲ್ಲಿ, ಸಂಪೂರ್ಣ ಮಾಹಿತಿ ನೀಡುವುದು;

ಇ) ಭೀಮಾಶಂಕರ ಸಹಕಾರಿ ಸಕ್ಕರೆ ಕಾರ್ಖಾನೆಯನ್ನು ಪುನಃಶ್ಚೇತನ ಗೊಳಿಸಿ, ಎಂದು ಪ್ರಾರಂಭಿಸಲಾಗುವುದು ಎಂಬುದರ ಬಗ್ಗೆ ವಿವರಣೆ ನೀಡುವುದು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು)

ಅ) ಹೌದು. ಆಯುಕ್ತರು ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ನಿರ್ದೇಶಕರ ದಿನಾಂಕ 28-2-2007ರ ಡಿಎಸ್‌ಕೆ / ಇಎಸ್‌ಟಿಎಸ್ / ಎಲ್‌ಕ್ಯೂಡಿ / 53 /